ಸಂಪಾದಕೀಯ

# ಶ್ರೀಮಾತೆಯವರ ಪೂರ್ಣದೃಷ್ಟಿ

## ವ್ಯಕ್ತಿತ್ವದ ವೈಪರೀತ್ಯಗಳು

**ಯಾ**ವುದೇ ಒಂದು ಘಟನೆಯನ್ನಾಗಲಿ, ವಸ್ತುವನ್ನಾಗಲಿ ಅಥವಾ ವ್ಯಕ್ತಿಯನ್ನಾಗಲಿ ನಾವು ಪರಿಪೂರ್ಣವಾಗಿ ನೋಡುವುದೇ ಇಲ್ಲ. ಹಿಂದಿನ ನೆನಪುಗಳಿಂದ ಅಥವಾ ಭವಿಷ್ಯದ ಊಹೆಗಳಿಂದ ಪೀಡಿತವಾದ ನಮ್ಮ ಮನಸ್ಸು ಪ್ರತಿಯೊಂದನ್ನೂ ಬಿಡಿಬಿಡಿಯಾಗಿ ಮಾಡಿ ತಿಳಿಯಲು ಪ್ರಯತ್ನಿಸುತ್ತದೆ. ಇಂತಹ ವಿಭಜನೆಯಿಂದ ದೊರೆಯುವ ಜ್ಞಾನವು ಪರಿಮಿತವಾಗಿರುತ್ತದೆ. ಉದಾಹರಣೆಗೆ, ಒಂದು ಸುಂದರವಾದ ಹೂವನ್ನು ಕಂಡಾಗ ಅದರ ಹೆಸರು, ಬಣ್ಣ, ಅಳತೆ, ಗುಂಪು ಇತ್ಯಾದಿಗಳನ್ನು ಗಮನಿಸುತ್ತ ಹೋದರೆ ಅದರ ಸೊಬಗಿನ ರಸಾಸ್ವಾದಕ್ಕೆ ಭಂಗವುಂಟಾಗುತ್ತದೆ. ಯಾವುದೇ ಲೆಕ್ಕಾಚಾರವಿಲ್ಲದೆ, ಪೂರ್ವಾಗ್ರಹವಿಲ್ಲದೆ ನೋಡುವುದನ್ನು ರೂಢಿಸಿಕೊಂಡಾಗ ಮಾತ್ರ ಮಾನವನು ತನ್ನ ಜೀವನದಲ್ಲಿ ಸುಖ, ನೆಮ್ಮದಿಗಳನ್ನು ಕಾಣಲು ಸಾಧ್ಯ. ಬುದ್ಧಿಗೇ ಹೆಚ್ಚು ಪ್ರಾಶಸ್ತ್ಯ ನೀಡಿ, ಹೃದಯದ ಭಾವನೆಗಳಿಗೆ ಜೀವನದಲ್ಲಿ ಆಸ್ಪದವಿಲ್ಲದಿದ್ದರೆ, ಆಗ, ಬರಡು ವಿಚಾರವೇ ಮೇಲ್ಮೆ ಪಡೆಯುತ್ತದೆ. ಆಗ ವ್ಯಕ್ತಿಯು ಭಾವನಾತ್ಮಕನಾಗಿ ವಿಫಲನಾಗುತ್ತಾನೆ. ಹಾಗೆಂದು ಅತಿಯಾದ ಭಾವುಕತೆ ಕೂಡ ಒಳ್ಳೆಯದಲ್ಲ, ಏಕೆಂದರೆ, ಅದೊಂದು ಹುಚ್ಚುಹೊಳೆಯಿದ್ದಂತೆ. **ವಿಚಾರ ಹಾಗೂ ಭಾವನೆ** – ಇವೆರಡರ ಸಮತೋಲನವನ್ನು ಕಾಪಾಡಿಕೊಂಡಾಗ ಮಾತ್ರ ಜೀವನ ಸುಖಮಯವಾಗಲು ಸಾಧ್ಯ.

> ಮನುಷ್ಯನ ಬುದ್ಧಿ ಎಷ್ಟು ಅಲ್ಪ! ಅವನಿಗೆ ಬೇಕಾಗಿರುವುದು ಒಂದು; ಅವನು ಕೇಳುವುದು ಮತ್ತೊಂದು.... ಭಗವಂತನಡಿಯಲ್ಲಿ ನಮ್ಮ ಆಸೆಯನ್ನೆಲ್ಲ ಒಪ್ಪಿಸುವುದು ಒಳ್ಳೆಯದು. ನಮಗೆ ಯಾವುದು ಶುಭವೋ ಅದನ್ನೆಲ್ಲ ಅವನು ಮಾಡುವನು. ಭಕ್ತ ಅನಾಸಕ್ತಿಯನ್ನು ಬೇಕಾದರೆ ಬೇಡಬಹುದು
>
> – *ಶ್ರೀಮಾತೆ ಶಾರದಾದೇವಿ*

ಜೀವನದುದ್ದಕ್ಕೂ ಮಾನವ ತನ್ನ ಅನುಭವಕ್ಕೆ ಬರುವ ಭಾವನೆಗಳಲ್ಲಿ ಹಾಗೂ ಗೋಚರಿಸುವ ವಸ್ತುಗಳಲ್ಲಿ ಸ್ವಭಾವತಃ ಭೇದದೃಷ್ಟಿಯನ್ನು ಬೆಳೆಸಿಕೊಂಡಿರುತ್ತಾನೆ. ಅದರಿಂದ ಅವನ ತೀರ್ಮಾನಗಳೂ ಕೂಡ ಸ್ವಾರ್ಥದ ಛಾಯೆಯುಳ್ಳ ವೈಯಕ್ತಿಕ ಬಯಕೆಗಳಿಂದ ಕಲುಷಿತವಾಗಿರುತ್ತವೆ. ಇವೆಲ್ಲ ನಾನಾ ತೊಂದರೆಗಳಿಗೆ ಅವನನ್ನು ಸಿಲುಕಿಸುತ್ತವೆ. ತಾರತಮ್ಯದ ದೃಷ್ಟಿಯಿಂದಾಗಿ ತನಗೆ ದೊರೆತಿರುವುದರಲ್ಲಿ ಸಮಾಧಾನವಿಲ್ಲದೆ, ಕೈಗೆ ಎಟುಕದ ಸುಖಗಳತ್ತಲೇ ಆಕರ್ಷಿತನಾಗಿ ಅವನು ಒದ್ದಾಡುತ್ತಿರುತ್ತಾನೆ. ಅತೃಪ್ತಿಯ ಬೇಗೆ ಅವನನ್ನು ಸದಾ ಸುಡುತ್ತಿರುತ್ತದೆ. 'ಇದು ಅಲ್ಪ, ಅದು ಮಹತ್; ಇದು ಬೇಕು, ಅದು ಬೇಡ; ಈತ ಬೇಕಾದವ, ಆತ ಬೇಡದವ' ಎಂಬ ವ್ಯತ್ಯಾಸಗಳನ್ನು ಕಾಣುತ್ತಿರುವ ತನಕ ಸಂಘರ್ಷ, ಅಸಮಾಧಾನ, ಮಾನಸಿಕ ಒತ್ತಡ ಹಾಗೂ ತಿರಸ್ಕಾರಗಳಿಂದ ಉಂಟಾಗುವ ಅಸ್ಥಿರತೆ ಅವನನ್ನು ಕಾಡುತ್ತಿರುತ್ತದೆ. ತೃಪ್ತಿ, ಸುಖ ಹಾಗೂ ನಿರಾತಂಕ ಬದುಕು ಅವನ ಕನಸಿಗೂ ನಿಲುಕದ ಸ್ಥಿತಿಯಾಗಿ ಉಳಿದುಬಿಡುತ್ತದೆ. ಅವನು ಹೊರಗೆ ಕಾಣುವ ಭಿನ್ನತೆ ಅಥವಾ ತಾರತಮ್ಯತೆ ಅವನ ವ್ಯಕ್ತಿತ್ವದೊಳಗೂ ಆಳವಾಗಿ ಪ್ರವೇಶ ಮಾಡುತ್ತದೆ. ಇದರಿಂದ ವ್ಯಕ್ತಿಯು ತನ್ನ ಬಗ್ಗೆಯೇ ಅಸಮಾಧಾನ, ಅತೃಪ್ತಿ ತಾಳುತ್ತಾನೆ.

ಇಂತಹ ಪರಿಸ್ಥಿತಿ ಎಲ್ಲ ಮಾನವರಿಗೂ ಸಹಜ. ಹಾಗಿದ್ದಾಗ, ಇದರಿಂದ ಪಾರಾಗುವುದು ಹೇಗೆ ಎಂಬ ಪ್ರಶ್ನೆ ನಮಗೆ ಕಾಡುವುದು ಸಹಜ. ಆದರೆ, ಅದಕ್ಕೆ ವಿರುದ್ಧವಾಗಿ, ಎಲ್ಲವನ್ನೂ ಸಮಭಾವದಿಂದ ನೋಡುತ್ತ, ಕೇವಲ ಸಾಕ್ಷಿಯಂತೆ ನಿರ್ಲಿಪ್ತರಾಗಿ, ನಿಸ್ವಾರ್ಥ ಪ್ರೀತಿಯ ಆಗರವಾಗಿರುವ ವ್ಯಕ್ತಿಗಳೂ ನಮ್ಮ ಮುಂದೆಯೇ ಇದ್ದಾರಲ್ಲವೆ? ಅಂತಹವರನ್ನು ನಾವು ಗಮನಿಸಬೇಕು; ಅವರಿಂದ ಕಲಿಯುವ ತಾಳ್ಮೆಯನ್ನು ಬೆಳೆಸಿಕೊಳ್ಳಬೇಕು, ಅಷ್ಟೆ. ಇದೊಂದೇ ಬದುಕಿನ ವೈಪರೀತ್ಯಗಳಿಂದ ಬಿಡಿಸಿಕೊಳ್ಳಲು ಇರುವ ಏಕೈಕ ಮಾರ್ಗ. ಶ್ರೀಶಾರದಾದೇವಿಯವರು ಅಂತಹವರಲ್ಲಿ ಒಬ್ಬರು. ಅವರ ಜೀವನವನ್ನು ಈ ಆಯಾಮದಿಂದ ನೋಡಿ, ಕಲಿಯುವ ಪ್ರಯತ್ನ ಮಾಡೋಣ.

## ಸಮಗ್ರ ಮಾನವತೆಯ ಭಾವನೆ

ಗ್ರಾಮ್ಯ ಪರಿಸರದಲ್ಲಿ ಹುಟ್ಟಿ ಬೆಳೆದ ಶ್ರೀಮಾತೆ ಶಾರದಾದೇವಿಯವರಿಗೆ ಶಾಲೆಯ ಶಿಕ್ಷಣದ ಸೌಭಾಗ್ಯವೂ ಇರಲಿಲ್ಲ. ಆದರೂ ಅವರ ವ್ಯಕ್ತಿತ್ವದಲ್ಲಿ ನಾವು ಕಾಣುವ ಹೃದಯ ವೈಶಾಲ್ಯತೆ ಹಾಗೂ ಪೂರ್ಣದೃಷ್ಟಿ ಅಸಾಮಾನ್ಯ. ಸಂಸಾರದಲ್ಲಿ ತಾಯಿಯೊಬ್ಬಳು ತನ್ನ ಮಗುವನ್ನು ಪ್ರೀತಿಸುವಾಗ ತೋರುವ ಕಾಳಜಿ, ಮಮತೆ, ಅಕ್ಕರೆಗಳು ಆ ಮಗುವಿನಲ್ಲಿ ಭರವಸೆಯ ಭಾವವನ್ನು ಜಾಗೃತಗೊಳಿಸುತ್ತವೆ. ಅಷ್ಟೇ ವಾತ್ಸಲ್ಯವನ್ನು ಅವಳು ಇತರರ ಬಗ್ಗೆ ತೋರಲಾರಳು. ಆದರೆ ಶ್ರೀಮಾತೆಯವರು ಎಲ್ಲವನ್ನೂ, ಎಲ್ಲರನ್ನೂ ತಮ್ಮ ಮಾತೃವಾತ್ಸಲ್ಯದ ತೆಕ್ಕೆಯೊಳಗೆ ಸ್ವೀಕರಿಸಬಲ್ಲ ಸಮದೃಷ್ಟಿಯನ್ನು ಹೊಂದಿದ್ದರು. ದೇಶ, ಕಾಲ, ಜಾತಿ, ಧರ್ಮಗಳೆಂಬ ಅಡ್ಡಗೋಡೆಗಳು ಅವರ ಮಾತೃತ್ವದ ಪ್ರಕಟಣೆಗೆ ತೊಡಕಾಗಲಿಲ್ಲ. ಸಾಮಾನ್ಯರಿಗೆ ಅಸಾಧ್ಯವೆಂದೇ ತೋರುವ

ಸಮಗ್ರ ಮಾನವತೆಯ ಭಾವನೆ ಅವರಿಗೆ ಸ್ವಭಾವಸಹಜವಾಗಿತ್ತು. ಆದ್ದರಿಂದಲೇ ಅವರು ಎಲ್ಲರ ತಾಯಿಯಾಗಿದ್ದರು. ಜಗಜ್ಜನನಿ ಎಂಬ ಅಮೂರ್ತವಾದ ಭಾವನೆಯನ್ನು ತಮ್ಮ ಜೀವನದ ಮೂಲಕ ಸಾಕಾರಗೊಳಿಸಿದ ಶ್ರೀಮಾತೆ, ಶ್ವೇತಾಶ್ವತರ ಉಪನಿಷತ್ತಿನ ಒಂದು ಮಂತ್ರದ (೬-೨೦) ನಿದರ್ಶನವೆಂಬಂತೆ ಕಂಗೊಳಿಸುತ್ತಾರೆ: **'ಯದಾ ಚರ್ಮವದ್ ಆಕಾಶಂ ವೇಷ್ಟಯಿಷ್ಯಂತಿ ಮಾನವಾಃ'** – ಯಾವಾಗ ಮನುಷ್ಯರು (ಒಂದು ತುಂಡು) ಚರ್ಮವನ್ನು ಸುತ್ತಿಡುವಂತೆ ಆಕಾಶವನ್ನು ಸುತ್ತಿಡಬಲ್ಲರೋ, ಅಂದರೆ ಅಮೂರ್ತವೂ ವ್ಯಾಪಕವೂ ಆದ ಆಕಾಶವನ್ನು (ಕೈಯಲ್ಲಿರುವ ವಸ್ತುವಿನಂತೆ) ತಮ್ಮದಾಗಿಸಿಕೊಳ್ಳುವರೋ ಆಗ ಅವರು ದುಃಖದಿಂದ ನಿವೃತ್ತಿಯನ್ನು ಹೊಂದುತ್ತಾರೆ.

**ಈ ಪ್ರಾಪಂಚಿಕ ಜೀವನದಲ್ಲಿ ಏನಿದೆ? ಆದರೂ ಜನ ಅದರಲ್ಲಿ ಎಷ್ಟೊಂದು ಆಸಕ್ತರಾಗಿದ್ದಾರೆ ! ನೋಡು, ಒಬ್ಬ ವ್ಯಕ್ತಿಗೆ ಎಷ್ಟೊಂದು ಮಕ್ಕಳು! ಅವರ ಶರೀರಶಕ್ತಿ-ಮನಶ್ಶಕ್ತಿಯೆಲ್ಲ ಹಿಂಡಿ ಹೀರಿ ಹರಿಯುತ್ತಿದೆ. ಈ ಸ್ಥಿತಿಯಲ್ಲಿರುವಾಗ ಆಧ್ಯಾತ್ಮಿಕ ಉನ್ನತಿ ಹೇಗೆ ಸಾಧ್ಯ ?**

*- ಶ್ರೀಮಾತೆ ಶಾರದಾದೇವಿ*

### ಅನಾಸಕ್ತಿಯೊಂದಿಗೆ ಕೂಡಿದ ಅನುರಕ್ತಿ

ಪುಣ್ಯಕರ್ಮವಾಗಲೀ ಪಾಪಕರ್ಮವೇ ಆಗಲಿ, ರಾಗದ್ವೇಷಗಳಿಂದ ಪ್ರೇರಿತರಾಗಿದ್ದರೆ, ಅಂತಹವರು ದುಃಖವನ್ನು ಅನುಭವಿಸುತ್ತಾರೆ. ಈ ಸ್ಥಿತಿಯಿಂದ ಹೊರಬರಬೇಕಾದರೆ ಭೇದದೃಷ್ಟಿಯನ್ನು ಬಿಡಬೇಕು. ಶ್ರೀಮಾತೆ ಇದನ್ನು ಸಾಧಿಸಿದ್ದರು. 'ಹೇ ದೇವರೇ, ನಾನು ಯಾರಲ್ಲೂ ದೋಷವನ್ನು ನೋಡದಂತೆ ಮಾಡು, ನನ್ನ ದೃಷ್ಟಿ ನೇರವಾಗಿರಲಿ" ಎಂದು ಅವರು ಪುನಃ ಪುನಃ ಪ್ರಾರ್ಥಿಸುತ್ತಿದ್ದರು. ತಾಯಿಹಕ್ಕಿಯು ತನ್ನ ಗೂಡಿನಲ್ಲಿರುವ ಮರಿಗಳಿಗೆ ಮಮತೆಯ ರಕ್ಷಣೆಯನ್ನು ನೀಡುವಂತೆ, ಶ್ರೀಮಾತೆ ತಮ್ಮ ಬಳಿಗೆ ಬಂದವರಿಗೆಲ್ಲ ಪ್ರೀತಿಯ ಆಸರೆಯಾಗಿದ್ದರು. ಗೂಡಿನ ಆಪ್ತತೆಯೊಂದಿಗೆ ಹೊರಗಿನ ಆಕಾಶದ ವ್ಯಾಪ್ತಿಯನ್ನು, ವಿಶಾಲವಾದ ನಿಲುವನ್ನು, ಏಕಕಾಲದಲ್ಲಿ ಪ್ರಕಟಗೊಳಿಸುವ ಸಾಮರ್ಥ್ಯ ಶ್ರೀಮಾತೆಯವರಿಗಿತ್ತು. ಯಾರಿಗಾದರೂ ತಮ್ಮ ಸ್ವಂತ ತಾಯಿಯೇ ಇವರಲ್ಲಿ ವ್ಯಕ್ತವಾಗಿದ್ದಾರೆ ಅನ್ನಿಸುವಷ್ಟು ತೀವ್ರವಾದ ಮಮತೆ, ಅಕ್ಕರೆಗಳನ್ನು ಹೊರಸೂಸುತ್ತಿದ್ದರು. ಆದರೂ, ಅದರ ಹಿನ್ನೆಲೆಯಲ್ಲಿ, ಒಂದು ಅಲೌಕಿಕ ನಿರ್ಲಿಪ್ತತೆ ಹಾಗೂ ಸಂಯಮಗಳೂ ಕಂಗೊಳಿಸುತ್ತಿದ್ದವು. ಸ್ವಾಮಿ ವಿವೇಕಾನಂದರು ತಮ್ಮ 'ಕರ್ಮಯೋಗ' ಪ್ರವಚನದಲ್ಲಿ ವಿವರಿಸುವ 'ಅನಾಸಕ್ತಿಯೊಂದಿಗೆ ಕೂಡಿದ ಅನುರಕ್ತಿ' ಎಂದರೆ ಇದೇ ಏನೋ! ಇದು ಶ್ರೀಮಾತೆಯ ಸಹಜಸ್ಥಿತಿಯಾಗಿತ್ತು. ಅವರ ಜೀವನದ ಕೆಲವು ಘಟನೆಗಳು ಇದನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತವೆ:

ಒಂದು ಸಂಜೆ ನಾಲ್ಕು ಗಂಟೆಯ ಸುಮಾರಿಗೆ ಶ್ರೀಮಾತೆಯ ಸೋದರನ ಮಗಳಾದ ರಾಧಿ ಶಾಲೆಯಿಂದ ಹಿಂದಿರುಗಿ ಬಂದಳು. ಊಟ ಮುಗಿಸಿದ ಬಳಿಕ, ಅವಳ ತಲೆಗೂದಲನ್ನು ಬಾಚಲು, ಶ್ರೀಮಾತೆ ಅವಳನ್ನು ತಮ್ಮ ಬಳಿಗೆ ಬರುವಂತೆ ಕರೆದರು. ರಾಧಿ ತಾನು ಬರುವುದಿಲ್ಲವೆಂದೂ ತಾನೇ ಆಮೇಲೆ ಜಡೆ ಹಾಕಿಕೊಳ್ಳುವುದಾಗಿಯೂ ಹಟ ಹಿಡಿದಳು. ಶ್ರೀಮಾತೆ ತಮ್ಮ ಕೈಗೆ ಬಾಚಣಿಗೆಯನ್ನು ತೆಗೆದುಕೊಂಡರು. ಇದ್ದಕ್ಕಿದ್ದಂತೆ ರಾಧಿಯ ಕೋಪ ಕೆರಳಿ ಶ್ರೀಮಾತೆಯನ್ನು ಹೊಡೆಯಲಾರಂಭಿಸಿದಳು. ಎಷ್ಟು ಹೊತ್ತಾದರೂ ಹೊಡೆಯುವುದನ್ನು ನಿಲ್ಲಿಸಲಿಲ್ಲ. ಶ್ರೀಮಾತೆಯವರ ಪವಿತ್ರದೇಹಕ್ಕೆ ನೋವುಂಟಾಯಿತು. ಇನ್ನು ತಡೆಯಲಾರದೆ ಶ್ರೀಮಾತೆ ಕೂಗಿಕೊಂಡರು, "ಇನ್ನು ಶರತ್‌ನನ್ನು (ಸ್ವಾಮಿ ಶಾರದಾನಂದ) ಕರೆಯಬೇಕು. ನನ್ನಿಂದ ಈ ನೋವನ್ನು ಸಹಿಸುವುದು ಅಸಾಧ್ಯ."

ಅನೇಕ ಭಕ್ತರು ಶ್ರೀಮಾತೆಯನ್ನು ಜಗನ್ಮಾತೆಯೆಂದು ಆರಾಧಿಸುತ್ತಿದ್ದರು. ರಾಧಿಯ ಬಗ್ಗೆ ಅವರಿಗಿದ್ದ ವಾತ್ಸಲ್ಯವನ್ನು ಅರ್ಥಮಾಡಿಕೊಳ್ಳಲಾರದೆ ಗೊಂದಲಕ್ಕೆ ಒಳಗಾದವರೂ ಇದ್ದರು. ಆ ಹುಚ್ಚು ಹುಡುಗಿಯ ಗೊಡವೆ ಇವರಿಗೇಕೆ? ಎಂದೂ ಅವರು ಭಾವಿಸುತ್ತಿದ್ದರು. ಇದೊಂದು ದೌರ್ಬಲ್ಯವೆಂದೇ ತಿಳಿದು ಶ್ರೀಮಾತೆಯವರ ಬಗ್ಗೆ ಕೆಲವರು ಅಸಡ್ಡೆ ತೋರಿದ್ದೂ ಉಂಟು. ಶ್ರೀಶಾರದಾದೇವಿಯವರ ಪ್ರಸನ್ನತೆ, ದಿವ್ಯಭಾವಗಳಿಗೆ ಯಾವುದೇ ಕುಂದನ್ನು, ರಾಧಿಯ ಮೇಲಿರುವ ಅವರ ಮಮತೆ ತರಲಾರದು; ಅವರ ಅಂತರಂಗದ ಗಾಂಭೀರ್ಯವು ಬಹಳ ಗಹನವೆಂಬುದು ಎಲ್ಲೋ ಕೆಲವರಿಗೆ ಮಾತ್ರ ತಿಳಿಯುತ್ತಿತ್ತು. ಅವರ ವ್ಯಕ್ತಿತ್ವದ ಒಂದು ತುಣುಕನ್ನು ಮಾತ್ರ ನೋಡಿ ಅವಸರದ ನಿರ್ಧಾರವನ್ನು ಹೊಂದಿದ್ದ ಅಂಥ ಜನರು, ಅವರ ಪೂರ್ಣ ನಿಲುವನ್ನು ಸರಿಯಾಗಿ ತಿಳಿಯದೇ ಹೋದರು. ಒಂದು ಕ್ಷಣದಲ್ಲಿ ದಿವ್ಯಭಾವದಲ್ಲಿ ತಲ್ಲೀನರಾಗುತ್ತಿದ್ದ ಶ್ರೀಮಾತೆ, ಮತ್ತೊಂದು ಕ್ಷಣದಲ್ಲಿ, ಅಷ್ಟೇ ಉತ್ಸುಕತೆಯಿಂದ ಸಾಮಾನ್ಯ ಸ್ತ್ರೀಯಂತೆ ಸುತ್ತಮುತ್ತಲಿನ ಆಗುಹೋಗುಗಳಲ್ಲಿ ಭಾಗವಹಿಸುತ್ತಿದ್ದರು. ರಾಧಿಯನ್ನು ಬಹುವಾಗಿ ಪ್ರೀತಿಸುತ್ತಿದ್ದರೂ ಇತರರನ್ನು ಎಂದೂ ದೂರ ಇಟ್ಟವರಲ್ಲ. ಎಲ್ಲರೂ ಅವರಿಗೆ ಮಕ್ಕಳ ಸಮಾನ.

### ಭಾವಗ್ರಾಹೀ ಮಾತೃವಾತ್ಸಲ್ಯ

ಶ್ರೀಮಾತೆಯ ಶಿಷ್ಯ ಶ್ರೀ ಸುರೇಂದ್ರನಾಥ ಸರ್ಕಾರ್ ವಿವರಿಸುವ ಒಂದು ಘಟನೆಯು, ಸಕಲ ಜೀವಿಗಳ ಬಗ್ಗೆ, ಶ್ರೀಮಾತೆಯವರಲ್ಲಿದ್ದ ಮಾತೃವಾತ್ಸಲ್ಯವನ್ನು ನಿರೂಪಿಸುತ್ತದೆ. ಒಂದು ದಿನ ಬೆಳಿಗ್ಗೆ ಜಯರಾಂಬಾಟಿಯಲ್ಲಿ ಶ್ರೀಮಾತೆಯ ಮನೆಯ

ಬಳಿ, ಕರುವೊಂದು ಬಹಳ ಜೋರಾಗಿ ಕೂಗುತ್ತಿತ್ತು. ತಾಯಿ ಹಸುವಿನಿಂದ ಸ್ವಲ್ಪ ದೂರದಲ್ಲಿ ಅದನ್ನು ಕಟ್ಟಿಹಾಕಿದ್ದರಿಂದ ಹಾಲಿಗಾಗಿ ಅದು ಮೊರೆಯಿಡುತ್ತಿತ್ತು. ಈ ಕೂಗನ್ನು ಕೇಳಿಸಿಕೊಂಡು ಶ್ರೀಮಾತೆ ಎದ್ದೆನೋ ಬಿದ್ದೆನೋ ಎಂದು ಓಡಿಬಂದರು. "ಬಂದೆ ಕಂದ, ತಾಳು, ಬಂದೆ" ಎನ್ನುತ್ತ ಅದನ್ನು ಬಂಧನದಿಂದ ಬಿಡಿಸಿ ತನ್ನ ತಾಯಿಯ ಬಳಿಗೆ ಅದು ಹೋಗುವಂತೆ ಮಾಡಿದರು. ಆಗಲೇ ಅವರಿಗೆ ನೆಮ್ಮದಿ. ಈ ಬಗೆಯಲ್ಲಿ ಒಂದು ಮೂಕ ಪ್ರಾಣಿಯ ಭಾವನೆಗಳಿಗೂ ಸ್ಪಂದಿಸುವಂತಹ ಮಾತೃಹೃದಯವನ್ನು ಮೆರೆದ ಶ್ರೀಮಾತೆ ನಮ್ಮಲ್ಲಿ ಅಚ್ಚರಿ ಮೂಡಿಸುತ್ತಾರೆ. '*ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ*' **ಯಾವ ದೇವಿಯು ಎಲ್ಲ ಜೀವಿಗಳಲ್ಲಿಯೂ ಮಾತೃಸ್ವರೂಪದಿಂದ ಇದ್ದಾಳೆಯೋ ಅವಳೇ ಜಗನ್ಮಾತೆ** – ಎಂಬ ಶ್ರೀದುರ್ಗಾಸಪ್ತಶತಿಯ ಮಂತ್ರದ ಪರಿಪೂರ್ಣ ನಿದರ್ಶನವನ್ನು ನಾವು ಶ್ರೀಮಾತೆಯವರಲ್ಲಿ ಕಾಣುತ್ತೇವೆ.

ಶ್ರೀಮಾತೆಯವರ ಶಿಷ್ಯರಾದ ಸ್ವಾಮಿ ಅರೂಪಾನಂದರು ತಾವು ಸ್ವತಃ ಕಂಡ ಘಟನೆಯನ್ನು ಹೀಗೆ ವರ್ಣಿಸಿದ್ದಾರೆ: "ಒಮ್ಮೆ ಶ್ರೀಮಾತೆಯವರಿಗೆ ಬಹಳ ಜ್ವರ ಬಂದಿತ್ತು. ದಿನೇ ದಿನೇ ಜ್ವರ ಉಲ್ಬಣಿಸುತ್ತಲೇ ಹೋಯಿತು. ಶ್ರೀಮಾತೆಯ ಮೈಯೆಲ್ಲ ಬೆಂಕಿಯಂತೆ ಸುಡಲಾರಂಭಿಸಿತು. ಅಸಹನೀಯ ವೇದನೆಯನ್ನು ಅವರು ಅನುಭವಿಸುತ್ತಿದ್ದರು. 'ನನ್ನಿಂದ ಈ ಬೇಗೆ ತಡೆಯಲಾಗುತ್ತಿಲ್ಲ. ಎಲ್ಲಿಯಾದರೂ ತಂಪಾದ ನೀರಿನಲ್ಲೋ ಕೊಳದಲ್ಲೋ ಮುಳುಗೋಣ ಎಂದೆನಿಸುತ್ತಿದೆ' ಎಂದು ಶ್ರೀಮಾತೆ ಚಡಪಡಿಸಲಾರಂಭಿಸಿದರು. ಆಗ ಅರೂಪಾನಂದರು ಮಂಜಿನ ಗಡ್ಡೆಗಳನ್ನು ತರಿಸಿದರು; ಅದರ ಮೇಲೆ ತಮ್ಮ ಕೈಯಿಟ್ಟರು; ಆ ತಂಪಾದ ಕೈಗಳಿಂದ ಶ್ರೀಮಾತೆಯವರ ಹಣೆ ಹಾಗೂ ಕೈಕಾಲುಗಳನ್ನು ಸವರುತ್ತಿದ್ದರು. ಆದರೂ ಶ್ರೀಮಾತೆ ಜ್ವರದಿಂದ ಆಗಾಗ್ಗೆ ಪ್ರಜ್ಞಾಶೂನ್ಯರಾಗುತ್ತಿದ್ದರು. ಅವರಿಗೆ ಔಷಧಿಯನ್ನು ನೀಡಲು ಆಯುರ್ವೇದ ವೈದ್ಯರೊಬ್ಬರು ಬಂದಿದ್ದರು. ಅವರನ್ನು ಕಂಡಾಗ ಶ್ರೀಮಾತೆಗೆ ತಮ್ಮ ಕಾಹಿಲೆ ಮರೆತೇ ಹೋಯಿತು, ಅವರ ಆತಿಥ್ಯದ ಬಗ್ಗೆಯೇ ಚಿಂತೆ ಪ್ರಾರಂಭವಾಯಿತು. ಮಾತನಾಡಲೂ ಶಕ್ತಿಯಿಲ್ಲದೆ, ಮೆಲುದನಿಯಲ್ಲಿ ಅವರನ್ನು ಕೇಳಿಕೊಂಡರು: "ದಯವಿಟ್ಟು ಊಟ ಮಾಡಿ ಹೋಗಬೇಕು." ಅದಲ್ಲದೆ ತಮ್ಮ ಬಳಿಯಿದ್ದ ಸೇವಕರಿಗೂ ಹೇಳಿದರು: "ಅವರಿಗೆ ಒಳ್ಳೆಯ ಮಾವಿನಹಣ್ಣು ಹಾಗೂ ಸಿಹಿತಿಂಡಿಗಳನ್ನು ನೀಡಿ ಸತ್ಕರಿಸಿ." ಹೀಗೆ ತಮ್ಮ ಸ್ವಂತ ನೋವನ್ನು ಮರೆತು ಕೇವಲ ಇತರರ ಬಗ್ಗೆ ಆಲೋಚಿಸುವ ಔದಾರ್ಯವನ್ನು ಶ್ರೀಮಾತೆಯವರಲ್ಲಿ ಕಾಣುತ್ತೇವೆ. ದೈಹಿಕ ನೋವು ವಿಪರೀತವಾಗಿದ್ದರೂ ಅದೇಕಾಲದಲ್ಲಿ ದೈವಿಕ ಪ್ರೇಮವನ್ನೂ ಪ್ರಕಟಗೊಳಿಸಬಲ್ಲ ಅವರ ಅದಮ್ಯ ಸಾಮರ್ಥ್ಯ ನಮ್ಮಲ್ಲಿ ಅಚ್ಚರಿ ಮೂಡಿಸುತ್ತದೆ.



**ಮಗು, ಇಲ್ಲಿಗೆ ಬರುವವರಲ್ಲಿ ಎಷ್ಟೋ ಜನ ಎಂಥೆಂಥವರೋ ಇದ್ದಾರೆ. ಅವರು ಮಾಡದೆ ಇರುವ ಪಾಪವೇ ಇಲ್ಲ. ಆದರೆ ಅವರು ಇಲ್ಲಿಗೆ ಬಂದು ನನ್ನನ್ನು 'ಅಮ್ಮ' ಎಂದು ಕರೆದಾಗ ನಾನು ಎಲ್ಲವನ್ನೂ ಮರೆತುಬಿಡುತ್ತೇನೆ. ಅವರ ಯೋಗ್ಯತೆಗಿಂತಲೂ ಹೆಚ್ಚಾಗಿಯೇ ಅವರು ಇಲ್ಲಿಂದ ಪಡೆಯುತ್ತಾರೆ.**

– ಶ್ರೀಮಾತೆ ಶಾರದಾದೇವಿ

ರಾಧಿಯ ಬಳಿಯಿದ್ದ ಬಂಗಾರದ ಬಳೆಯನ್ನು ಅವಳ ಅಜ್ಜ (ಅವಳ ಹುಚ್ಚು ತಾಯಿಯ ತಂದೆ) ಕದ್ದುಬಿಟ್ಟಿದ್ದ. ಅದನ್ನು ಮರಳಿ ಪಡೆಯಲು ಶ್ರೀಮಾತೆಯವರ ಸಲಹೆಯಂತೆ, ವಚನವೇದದ ಲೇಖಕರಾದ ಮಾಸ್ಟರ್ ಮಹಾಶಯ ಮತ್ತು ಲಲಿತ್ ಬಾಬು ಎಂಬ ಒಬ್ಬ ಭಕ್ತರು ಅವನ ಗ್ರಾಮಕ್ಕೆ ಹೋಗಿದ್ದರು. ಹಾಗೂ ಹೀಗೂ ಮಾಡಿ ಒಡವೆಗಳೊಂದಿಗೆ ಆತನನ್ನು ಶ್ರೀಮಾತೆಯ ಬಳಿಗೆ ಕರೆತಂದರು. ಶ್ರೀಮಾತೆಗೆ ರಾತ್ರಿಯೆಲ್ಲ ನಿದ್ದೆಯಿಲ್ಲದೆ ತಲೆಸುತ್ತು ಬಂದಿತ್ತು. ಸ್ವಾಮಿ ಅರೂಪಾನಂದರು ಔಷಧಕ್ಕಾಗಿ ಹುಡುಕಾಡುತ್ತ ಕೇಳಿದರು, "ನಿಮಗೇಕೆ ನಿದ್ದೆ ಬರಲಿಲ್ಲ?" ಒತ್ತಾಯ ಮಾಡಿದಾಗ ಶ್ರೀಮಾತೆ ಹೇಳಿದರು, "ನೋಡು, ಇವರು ಆ ಒಡವೆಗಳನ್ನು ಹಿಂತಿರುಗಿ ತರಲು ಹೋಗಿದ್ದರು. ಕೋಪದಲ್ಲಿ ಆ ಬ್ರಾಹ್ಮಣನಿಗೆ ಎಲ್ಲಿ ಅವಮಾನ ಮಾಡುತ್ತಾರೋ, ಏನು ಅನಾಹುತವಾಗುವುದೋ ಎಂಬ ಚಿಂತೆಯಿಂದ ನನಗೆ ನಿದ್ದೆ ಹತ್ತಲಿಲ್ಲ." ಸ್ವಾಮಿ ಅರೂಪಾನಂದರಿಗೆ ಆಶ್ಚರ್ಯವಾಯಿತು. ಒಬ್ಬ ಕಳ್ಳನಿಗೆ ಅವಮಾನವಾಗುತ್ತದೆಯೆಂದು ಇವರು ಕಷ್ಟಪಡುತ್ತಿರುವರಲ್ಲ!

ಸ್ವಾಮಿ ವಿವೇಕಾನಂದರು ಒಮ್ಮೆ ಒಬ್ಬ ಕೆಲಸಗಾರನನ್ನು ಕಳ್ಳತನ ಮಾಡಿದ ಕಾರಣಕ್ಕಾಗಿ ಕೆಲಸದಿಂದ ತೆಗೆದುಹಾಕಿದರು.

ತ ಬಡಪಾಯಿ ಶ್ರೀಮಾತೆಯ ಬಳಿ ಬಂದು ತನ್ನ ಕಷ್ಟಗಳನ್ನು ಹೇಳಿಕೊಂಡನು. ಬಡತನದಿಂದಾಗಿ ಕಳ್ಳತನ ಮಾಡಿದ್ದ ಅವನನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಶ್ರೀಮಾತೆ ಆದೇಶವಿತ್ತರು. ಶ್ರೀಮಾತೆಯವರಿಗೆ ಅವನು ಕದ್ದಿದ್ದ ವಸ್ತುವಿಗಿಂತ, ಅವನ ಸಂಸಾರದ ತಾಪತ್ರಯಗಳ ಬಗ್ಗೆಯೇ ಕಾಳಜಿ ಹೆಚ್ಚಾಗಿತ್ತು.

**ಭರವಸೆಯ ಸೆಲೆ**

ಒಂದು ಸಣ್ಣ ಮಾನವ ದೇಹದಿಂದ ಎಂತಹ ಅದ್ಭುತ ವಿಶ್ವವ್ಯಾಪೀ ತರಂಗಗಳು ಹೊಮ್ಮಬಲ್ಲವು ಎಂಬುದಕ್ಕೆ ಶ್ರೀಮಾತೆಯವರೇ ನಿದರ್ಶನ. ಅವರ ದೃಷ್ಟಿಯಲ್ಲಿ ಯಾರೂ ದೂಷಿತರಲ್ಲ, ನಿಂದನೀಯರಲ್ಲ. ಅವರ ಬಳಿಗೆ ಬರುತ್ತಿದ್ದ ಒಬ್ಬ ಮಹಿಳೆಯ ನಡತೆ ಸರಿಯಿಲ್ಲವೆಂದು ಎಲ್ಲರಿಗೂ ತಿಳಿದಿತ್ತು. ಆದರೂ ಶ್ರೀಮಾತೆ ಆಕೆಯನ್ನು ಪ್ರೀತಿಯಿಂದ ಕಾಣುತ್ತಿದ್ದರು, ಮಗಳಂತೆ ಮಾತನಾಡಿಸುತ್ತಿದ್ದರು. ಭಕ್ತ ಬಲರಾಮ ಬಸುವಿನ ಪತ್ನಿ ಇದನ್ನು ಕಂಡು ಅಸಮಾಧಾನಗೊಂಡು, ಶ್ರೀಮಾತೆಯವರ ಬಳಿ ಆಕೆ ಬಂದರೆ ತಾವೆಲ್ಲ (ಒಳ್ಳೆ ಮನೆತನದವರು) ಬರುವುದನ್ನು ನಿಲ್ಲಿಸಬೇಕಾದೀತು ಎಂದಳು. ಗೋಲಾಪ್ ಮಾ ಈ ಆಕ್ಷೇಪಣೆಯನ್ನು ಶ್ರೀಮಾತೆಯ ಕಿವಿಗೆ ಹಾಕಿದಳು. ಬಲರಾಮ ಬಸುವಿನ ಪತ್ನಿ ಆಗ ಶ್ರೀಮಾತೆಯ ಎಲ್ಲ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಳು; ಬಹಳ ಬೇಕಾದವಳಾಗಿದ್ದಳು. ಅಂತಹವಳನ್ನು ಕುರಿತು ಶ್ರೀಮಾತೆ ಯಾವ ಮುಲಾಜೂ ಇಲ್ಲದೆ ದೃಢಸ್ವರದಿಂದ ಹೀಗೆ ಹೇಳಿದರು: "ಯಾರು ನನ್ನ ಬಳಿಗೆ ಬಂದು ಶರಣಾಗತರಾಗಿದ್ದಾರೋ ಅವರು ಬಂದೇ ಬರುತ್ತಾರೆ. ಅವರು ಬರುವುದರಿಂದ ಇತರರಿಗೆ ತೊಂದರೆಯಾಗುತ್ತಿದ್ದರೆ, ಅದಕ್ಕೆ ನಾನೇನು ಮಾಡಲಿ? ಅಂತಹವರು ಇಲ್ಲಿಗೆ ಬರಬಾರದು ಎಂದು ಹೇಳುವುದಾದರೆ, ನಾನೇ ಬೇರೆ ಕಡೆ ಹೋಗುತ್ತೇನೆ! ಒಳ್ಳೆ ಮನೆತನದವರಿಗೆ, ಅನೇಕ ಜನ ಸಹಾಯಕ್ಕೆ ಬರುತ್ತಾರೆ. ಅವರಿಗೆ ಸಹಾಯವನ್ನು ಯಾಚಿಸಲು ಅನೇಕ ಸ್ಥಳಗಳಿವೆ. ಆದರೆ, ಇಂತಹವರಿಗೆ ಬೇರೆ ಯಾರು ತಾನೇ ಇದ್ದಾರೆ? ನಾನೆಂದೂ ಅವಳಿಗೆ ಬರಬೇಡ ಎಂದು ಹೇಳಲಾರೆ, ನನ್ನನ್ನು ಬಿಟ್ಟು ಅವಳಿಗೆ ಇನ್ನಾರು ಗತಿ?"

ಬಿರುದು, ಸನ್ಮಾನಗಳಿಂದ ದೂರವುಳಿದು, ತೆರೆಯ ಮರೆಯಲ್ಲೇ ಬೆಳಗಿದ ಶ್ರೀಮಾತೆಯ ನಿರಾಡಂಬರ ಜೀವನದಲ್ಲಿ ಇವೆಲ್ಲ ಸಣ್ಣ ಸಣ್ಣ ಘಟನೆಗಳೇನೋ ಸರಿ. ಆದರೆ, ಅವರ ವ್ಯಕ್ತಿತ್ವದ ಮಹದ್ದರ್ಶನವನ್ನು ಇವು ನಮಗೆ ಪರಿಚಯಿಸುತ್ತವೆ. ಕಿಂಡಿಯ ಮೂಲಕ ಪ್ರಖರನಾದ ಸೂರ್ಯನನ್ನು ಸುಲಭವಾಗಿ ನೋಡಬಹುದು. ಅದರಂತೆ ಈ ಘಟನೆಗಳು ಅವರ ಪರಿಪೂರ್ಣ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಂತಿವೆ. ಜಾತಿ, ದೇಶಗಳೆಂಬ ಕಟ್ಟಳೆಗಳನ್ನು ಮೀರಿ ಅವರು ನಿವೇದಿತಾಳನ್ನು ಬರಮಾಡಿಕೊಂಡ ರೀತಿ, ರಾಮಕೃಷ್ಣ ಸಂಘದ ಸೇವಾಕಾರ್ಯಗಳನ್ನು ಸಮರ್ಥಿಸಿ ಅವರು ತಾಳಿದ ನಿಲುವು, ಹಣದ ಕೊರತೆಯಿಂದಾಗಿ ಬೇಲೂರು ಮಠದ ಜಾಗವನ್ನೇ ಮಾರಲು ಹೊರಟಿದ್ದ ವಿವೇಕಾನಂದರಿಗೆ ಬುದ್ಧಿ ಹೇಳಿದ ವ್ಯಾವಹಾರಿಕ ಚಾತುರ್ಯ –ಇವೆಲ್ಲ ಘಟನೆಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿದರೂ ಅವುಗಳಲ್ಲಿ ಪ್ರತಿಯೊಂದು ಸಂಗತಿಯೂ ಶ್ರೀಮಾತೆಯ ಅಸಾಮಾನ್ಯ ಬುದ್ಧಿಮತ್ತೆಯನ್ನೂ ಪೂರ್ಣದೃಷ್ಟಿಯನ್ನೂ ನಮಗೆ ಪರಿಚಯಿಸುತ್ತವೆ. ಇಂತಹ ಒಂದೊಂದು ಘಟನೆಯೂ ನಮಗೆ ದಾರಿದೀಪವಾಗಬಲ್ಲದು; ಅಂಧಕಾರಮಯ ಸಮಾಜದಲ್ಲಿ ತಂಪೆರೆವ ಬೆಳದಿಂಗಳಾಗಬಲ್ಲದು; ನಾವು ನೀವೆಲ್ಲರೂ ಸಮಾನವಾಗಿ ಪ್ರೀತಿಸುವ ಚಂದಮಾಮನಂತೆ ಭರವಸೆಯ ಹಾಗೂ ಪ್ರೀತಿಯ ಸೆಲೆಯಾಗಿ ನಮಗೆ ಆಪ್ಯಾಯಮಾನವಾಗಬಲ್ಲದು.


# ಆಧ್ಯಾತ್ಮಿಕ ಶಿಬಿರ

(ಪುರುಷರಿಗಾಗಿ ಆವಾಸಿ ಕ್ಯಾಂಪ್)

***2008ನೇ ಜನವರಿ 17ರಿಂದ 21ರವರೆಗೆ***

**ಶಿಬಿರದ ತರಗತಿಗಳನ್ನು ನಡೆಸಲಾಗುವ ಮಾಧ್ಯಮ : ಕನ್ನಡ ಮತ್ತು ಇಂಗ್ಲಿಷ್**

**ಐದು ದಿನಗಳ ಶಿಬಿರಕ್ಕಾಗಿ ತಗಲುವ ಊಟ, ವಸತಿಯ ಖರ್ಚು : ರೂ. 775/- ಮಾತ್ರ.**

ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ಸ್ವವಿಳಾಸವಿರುವ (10 cm x 23 cm) ಕವರಿಗೆ ರೂ.5ರ ಪೋಸ್ಟಲ್ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟ್‌ರನ್ನು ಹೆಸರಿಸಿ, ಕೆಳಗಿನ ವಿಳಾಸಕ್ಕೆ ಬರೆಯಿರಿ.

**ತುಂಬಿಸಿದ ಅರ್ಜಿ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 05-01-2008**

**Ramakrishna Institute of Moral and Spiritual Education, Yadavagiri, Mysore 570 020**

Phone:0821-2417666, 2411140; TELE-FAX: 0821-2412800; e-mail: mysore.rimse@gmail.com